**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.**

**ಎಸ್ ಸಿ ಕೇಸ್ ನಂ.49/2024**

ಪ್ರಾ.ಸಾ. 6

ಚಾ.ಸಾ. 6

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಿದ ದಿನಾಂಕ 02.09.2025**

ಸಾಕ್ಷಿದಾರರ ಹೆಸರು ಶಿವಲಿಂಗಯ್ಯ

ತಂದೆಯ ಹೆಸರು ಲಿಂಗಯ್ಯ

ವಯಸ್ಸು 40 ವರ್ಷ

ಉದ್ಯೋಗ ವ್ಯವಸಾಯ

ವಾಸ ದುಂಡನಹಳ್ಳಿ ಗ್ರಾಮ

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

1. ಚಾಸಾ.1 ರಿಂದ ಚಾಸಾ.4 ನನಗೆ ಗೊತ್ತು. ನ್ಯಾಯಾಲಯದ ಮುಂದೆ ಹಾಜರು ಇರುವ 2 ರಿಂದ 5 ನೇ ಆರೋಪಿಗಳೂ ಕೂಡ ಗೊತ್ತು. ಆರೋಪಿಗಳು ಏನು ಮಾಡಿದ್ದಾರೆ ನನಗೆ ಗೊತ್ತಿಲ್ಲ. ಆರೋಪಿಗಳು ಚಾಸಾ.1 ರಿಂದ ಚಾಸಾ.4 ರವರ ಮೇಲೆ ಗಲಾಟೆ ಮಾಡಿದ ವಿಚಾರ ನನಗೆ ಗೊತ್ತಿಲ್ಲ. ಪೊಲೀಸರು ನನ್ನನ್ನು ವಿಚಾರಣೆ ಮಾಡಿ ನನ್ನ ಹೇಳಿಕೆ ಪಡೆದುಕೊಂಡಿಲ್ಲ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು

ಪರಿಗಣಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಗಿದೆ.)

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

2. ದಿನಾಂಕ 10.03.2023 ರಂದು ರಾತ್ರಿ ಸುಮಾರು 10.00 ಗಂಟೆ ಸಮಯದಲ್ಲಿ ಚಾಸಾ.1 ಮತ್ತು ಚಾಸಾ.2 ರವರು ನಮ್ಮ ಗ್ರಾಮದಲ್ಲಿ ಹಾದು ಹೋಗುವ ತುಮಕೂರು-ಮದ್ದೂರು ಮುಖ್ಯ ರಸ್ತೆಯ ಪಕ್ಕದಲ್ಲಿರುವ ಟೀ ಅಂಗಡಿ ಬಳಿ ಇದ್ದಾಗ ಪ್ರಕರಣದ 3 ಮತ್ತು 4ನೇ ಆರೋಪಿಗಳು ಚಾಸಾ.1 ಮತ್ತು ಚಾಸಾ.2 ರವರ ಮೇಲೆ ಹಳೆಯ ದ್ವೇಷದಿಂದ ಗಲಾಟೆ ಮಾಡಿದರು ಎಂದರೆ ನನಗೆ ಗೊತ್ತಿಲ್ಲ. ಬಳಿಕ ಚಾಸಾ.1 ಮತ್ತು ಚಾಸಾ.2 ಈ ವಿಚಾರವನ್ನು ಚಾಸಾ.4 ರವರಲ್ಲಿ ಹೇಳಿದರು ಎಂಬ ವಿಚಾರ ನನಗೆ ಗೊತ್ತಾಯಿತು ಎಂದರೆ ಸರಿಯಲ್ಲ. ಇದೇ ದ್ವೇಷದಿಂದ ದಿನಾಂಕ 11.03.2023 ರಂದು ಬೆಳಗ್ಗೆ 10.00 ಗಂಟೆ ಸಮಯದಲ್ಲಿ ಆರೋಪಿಗಳೆಲ್ಲಾ ಸೇರಿಕೊಂಡು ಚಾಸಾ.1 ಮತ್ತು ಚಾಸಾ.2 ರವರ ಮನೆಯ ಬಳಿ ಬಂದು ಅವರಿಗೆ ಅವ್ಯಾಚ ಪದಗಳಿಂದ ಬೈದರು, ಮನೆಯಿಂದ ಹೊರಗಡೆ ಬನ್ನಿ ಎಂದು ಕರೆದರು ಎಂದರೆ ನನಗೆ ಗೊತ್ತಿಲ್ಲ. ವಿಚಾರ ತಿಳಿದು ನಾನು, ಚಾಸಾ.4, ಚಾಸಾ.5 ಮತ್ತು ಚಾಸಾ.7 ರವರು ಚಾಸಾ.1 ಮತ್ತು ಚಾಸಾ.2 ರವರ ಮನೆಯ ಬಳಿ ಬಂದೆವು ಎಂದರೆ ನನಗೆ ಗೊತ್ತಿಲ್ಲ. ಆಗ ಚಾಸಾ.1 ಮತ್ತು ಚಾಸಾ.2 ರವರು ಮನೆಯ ಹೊರಗೆ ಬರದೇ ಇದ್ದಾಗ ಎಲ್ಲಾ ಆರೋಪಿಗಳು ಅವರ ಮನೆಯೊಳಗೆ ನುಗ್ಗಿ ಚಾಸಾ.1 ಮತ್ತು ಚಾಸಾ.2 ರವರನ್ನು ಮನೆಯ ಹೊರಗೆ ಎಳೆದು ತಂದು ಕೈಗಳಿಂದ ಹೊಡೆದು, ಕಾಲುಗಳಿಂದ ತುಳಿದು ನೋವುಂಟು ಮಾಡಿದರು ಎಂದರೆ ನನಗೆ ಗೊತ್ತಿಲ್ಲ.

3. 1ನೇ ಆರೋಪಿ ತನ್ನ ಪ್ಯಾಂಟು ಜೇಬಿನಿಂದ ಒಂದು ಡ್ರ್ಯಾಗರ್ ತೆಗೆದು ಚಾಸಾ.2 ರವರನ್ನು ಕೊಲೆ ಮಾಡುವ ಉದ್ದೇಶದಿಂದ ಡ್ರ್ಯಾಗರ್ ನಿಂದ ಚಾಸಾ.2 ರವರ ಎದೆಗೆ ಚುಚ್ಚಲು ಪ್ರಯತ್ನಿಸಿದಾಗ ಚಾಸಾ.2 ತಪ್ಪಿಸಿಕೊಂಡ, ಆಗ ಏಟು ಚಾಸಾ.2 ರವರ ಎಡಭುಜಕ್ಕೆ ತಾಗಿ ರಕ್ತ ಗಾಯವಾಯಿತು ಎಂದರೆ ನನಗೆ ಗೊತ್ತಿಲ್ಲ. ಆಗ ಚಾಸಾ.3 ಮತ್ತು ಚಾಸಾ.4 ಗಲಾಟೆ ಬಿಡಿಸಲು ಹೋದರು, ಆಗ 1ನೇ ಆರೋಪಿ ತನ್ನ ಕೈಯಲ್ಲಿದ್ದ ಡ್ರ್ಯಾಗರ್ ನಿಂದ ಚಾಸಾ.4 ರವರ ಬಲಮುಂಗೈಗೆ ಚುಚ್ಚಿ ರಕ್ತ ಗಾಯ ಮಾಡಿದ ಅದೇ ರೀತಿ ಚಾಸಾ.3 ರವರಿಗೆ 1ನೇ ಆರೋಪಿ ಡ್ರ್ಯಾಗರ್ ನಿಂದ ಹೊಟ್ಟೆಯ ಎಡಭಾಗಕ್ಕೆ ಚುಚ್ಚಿ ರಕ್ತಗಾಯ ಮಾಡಿದ ಎಂದರೆ ನನಗೆ ಗೊತ್ತಿಲ್ಲ. ಆಗ ಆರೋಪಿ 2 ಮತ್ತು 3 ರವರು ಚಾಸಾ.3 ರವರಿಗೆ ಕೈಗಳಿಂದ ಹೊಡೆದು ನೋವುಂಟು

ಮಾಡಿದರು ಎಂದರೆ ನನಗೆ ಗೊತ್ತಿಲ್ಲ. ಅದೇ ಸಮಯಕ್ಕೆ 5ನೇ ಆರೋಪಿ ಮತ್ತು ಭರತ್ ಚಾಸಾ.4 ರವರಿಗೆ ಕೈಗಳಿಂದ ಮೈಕೈಗೆ ಹೊಡೆದು ನೋವುಂಟು ಮಾಡಿದರು ಎಂದರೆ ಸರಿಯಲ್ಲ. ಆಗ ನಾನು ಮತ್ತು ಚಾಸಾ.5 ಮತ್ತು ಚಾಸಾ.7 ರವರು ಗಲಾಟೆ ಬಿಡಿಸಿದೆವು ಎಂದರೆ ಸರಿಯಲ್ಲ. ಆಗ ಆರೋಪಿಗಳೆಲ್ಲರೂ ಚಾಸಾ.1 ರಿಂದ ಚಾಸಾ.4 ರವರಿಗೆ ಕೊಲೆ ಬೆದರಿಕೆ ಹಾಕಿ ಅಲ್ಲಿಂದ ಹೋದರು ಎಂದರೆ ನನಗೆ ಗೊತ್ತಿಲ್ಲ.

4. ಈ ಬಾಬ್ತು ಚಾಸಾ.1ರವರು ಪೊಲೀಸರಿಗೆ ದೂರು ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಬಳಿಕ ಪೊಲೀಸರು ನನ್ನನು ದಿನಾಂಕ 12.03.2023 ರಂದು ವಿಚಾರಣೆ ಮಾಡಿ ನನ್ನ ಹೇಳಿಕೆ ದಾಖಲಿಸಿಕೊಂಡರು ಎಂದರೆ ಸರಿಯಲ್ಲ. ನಾನು ನನ್ನ ಹೇಳಿಕೆಯಲ್ಲಿ ಮೇಲೆ ಹೇಳಿದಂತೆ ಆರೋಪಿಗಳು ಚಾಸಾ.1 ರಿಂದ ಚಾಸಾ.4 ರವರಿಗೆ ಹಲ್ಲೆ ಮಾಡಿದ್ದಾರೆಂದು ಹೇಳಿದ್ದೇನೆಂದರೆ ಸರಿಯಲ್ಲ. ಸಾಕ್ಷಿ ದಿನಾಂಕ 12.03.2023 ರ ಹೇಳಿಕೆಯ ಸಂಪೂರ್ಣ ಅಂಶಗಳನ್ನು ನಿರಾಕರಿಸಿದ ಕಾರಣ ಸದರಿ ಹೇಳಿಕೆಯನ್ನು ನಿಪಿ.8 ಎಂದು ಗುರುತಿಸಲಾಯಿತು.

5. ನಾನು ಹೇಳಿಕೆ ನೀಡಿ ಹಲ್ಲೆ ಬಗ್ಗೆ ಪೊಲೀಸರಿಗೆ ಹೇಳಿದ್ದರೂ ಹಲ್ಲೆಯನ್ನು ಕಣ್ಣಾರೆ ಕಂಡಿದ್ದರೂ ನೋಡಿಲ್ಲವೆಂದು ಆರೋಪಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ರಿಂದ 5 ನೇ ಆರೋಪಿತರ ಪರ ವಕೀಲರಿಂದಃ**

ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಒ.

(ಯಾದವ ಕೆ.)
4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮಂಡ್ಯ.